(ಇಂದು ದಿನಾಂಕಃ 28-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ. ಜೆ.ಪಿ.ಎ ವಕೀಲರಿಂದ :</u>**

1. ಮೊಹಮ್ಮದ ಹಬೀಬ ಅಲಿ ಖಾಸಿಮ ಅಲಿ ನನ್ನ ಹೆಸರು ಇರುತ್ತದೆ. ಸರ್ವೆ ನಂಬರ 21/2 ರಲ್ಲಿ 3 ಎಕರೆ ಮತ್ತು 21/3 ರಲ್ಲಿ 3 ಎಕರೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿ. ಸರ್ವೆ ನಂಬರ 21/2 ರಲ್ಲಿ 3 ಎಕರೆ ಮತ್ತು 21/3 ರಲ್ಲಿ 3 ಎಕರೆ ಜಮೀನುಗಳನ್ನು ನಾನು ದಿಃ 04-09-2021 ರಂದು ಪ್ರಕಾಶಬಾಬುರವರಿಗೆ ಕ್ರಯದ ಕರಾರು ಪತ್ರ ಬೆರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ನನ್ನ ಮಗನಿಗೆ ಗೊತ್ತು ಎಂದು ಹೇಳುತ್ತಾರೆ. ಸರ್ವೆ ನಂಬರ 21/1 ಜಮೀನು ನನ್ನ ಹೆಂಡತಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಈ 3 ಜಮೀನುಗಳ ಬಗ್ಗೆ ನಾನು ಮತ್ತು ನನ್ನ ಹೆಂಡತಿ ಇಬ್ಬರು ಪ್ರಕಾಶಬಾಬುರವರಿಗೆ ಕ್ರಯದ ಕರಾರು ಪತ್ರ ಬೆರೆದುಕೊಟ್ಟಿರುತ್ತೇನೆ ಎಂದರೆ ಸಾಕ್ಷಿ ಬರೆದುಕೊಟ್ಟಿರುತ್ತೆನೆ ಆದರೆ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಪ್ರಕಾಶಬಾಬುರವರಿಗೆ ಕ್ರಯದ ಕರಾರು ಪತ್ರ ಬೆರೆದುಕೊಡುವ ಸಮಯದಲ್ಲಿ ದಿಃ 16-09-2019 ರಲ್ಲಿ ಕ್ರಯದ ಕರಾರು ಪತ್ರ ರದ್ದು ಮಾಡಿರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಮಾರ್ಟಗೇಜ ಆಗಿತ್ತು ಮತ್ತು ಪ್ರಕಾಶಬಾಬುರವರಿಗು ಸಹ ಮಾರ್ಟಗೇಜ ಆಗಿತ್ತು ಎಂದು ಹೇಳುತ್ತಾರೆ. ಪ್ರಕಾಶಬಾಬುರವರಿಗೆ ಸ್ವಾಧೀನ ಇಲ್ಲದ ಕ್ರಯದ ಕರಾರು ಪತ್ರ ಬೆರೆದುಕೊಟ್ಟಿರುತ್ತೇನಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನನಗೆ ಓದಿ ಹೇಳಿಲ್ಲ ಎಂದು ಹೇಳುತ್ತಾರೆ.ದಿಃ 16-09-2019 ರಲ್ಲಿ ಕ್ರಯದ ಕರಾರು ಪತ್ರ ವಾದಿಗೆ ಬರೆದುಕೊಟ್ಟಿದ್ದರು ಸಹ ಅದನ್ನು ಮುಳುಗಿಸುವ ಉದ್ದೇಶದಿಂದ ಪ್ರಕಾಶಬಾಬುರವರಿಗೆ ಸ್ವಾಧೀನ ಇಲ್ಲದ ಕ್ರಯದ ಕರಾರು

ಪತ್ರ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರಿಗೆ ವಾಪಸ್ಸು ಹಣ ಕೊಟ್ಟಿರುತ್ತೇನೆ ಅಂತಾ ಹೇಳುತ್ತಾರೆ. ವಾದಿಯರು ನನಗೆ ಚಕ್ ಮುಖಾಂತರ ಹಣ ಕೊಟ್ಟಿದ್ದರು ಸಹ ನಾನು ಅದನ್ನು ಅವರಿಗೆ ಚಕ್ ಮುಖಾಂತ ವಾಪಸ್ಸು ಕೊಟ್ಟಿಲ್ಲ ಆದರೆ 4 ಜನರ ಸಮಕ್ಷಮದಲ್ಲಿ ಅವರ ಕೈಯಲ್ಲಿ ಹಣ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಆ 4 ಜನರ ಹೆಸರು ಅಕ್ಬರ, ಶರಣಬಸವ, ಫಯ್ಯಾಜರವರ ಮುಂದು ವಾದಿಗೆ ರೂ.8,00,000/-ಕೋಟ್ಟಿರುತ್ತೇನೆ ಅಂತಾ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು ಮಾರ್ಟಗೇಜ ತೆಗೆದುಹಾಕುತ್ತೇನೆ ಅಂತಾ ಹೇಳಿದ್ದರು ಆದರೆ ಅವರು ಈ ದಾವೆ ಹಾಕಿದ್ದಾರೆ ಎಂದು ಹೇಳುತ್ತಾರೆ. ವಾದಿಗೆ ವಾಪಸ್ಸು ಹಣ ಕೊಟ್ಟಿದ್ದರು ಸಹ ಅವರು ಮಾರ್ಟಗೇಜ ತೆಗೆದುಹಾಕುತ್ತೇನೆ ಅಂತಾ ಹೇಳಿದ್ದರು ಆದರೆ ಅವರು ಈ ದಾವೆ ಹಾಕಿದ್ದಾರೆ ಎಂದು ಅವರ ವಿರುದ್ಧ ಯಾವುದೇ ಪೋಲಿಸ ದೂರು ಕೊಟ್ಟಿಲ್ಲ ಅವರಿಗೆ ಮಾರ್ಟಗೇಜ ತೆಗೆದುಹಾಕುವಂತೆ ಯಾವುದೇ ನೋಟಿಸ್ಸು ಕೊಟ್ಟಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ರೂ.8,00,000/-ವಾದಿಗೆ ವಾಪಸ್ಸು ಕೊಡಲು ಹೋದಾಗ ಅವರು ಅದನ್ನು ತೆಗೆದುಕೊಳ್ಳದೆ ನಿರಾಕರಿಸಿರುತ್ತಾರೆ ಎಂದು ಬರೆದಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಡ್ಡಿ ಹೆಚ್ಚಿಗೆ ಆಗಬಾರದು ಎಂದು ಅವರಿಗೆ ರೂ.8,00,000/-ವಾದಿಗೆ ವಾಪಸ್ಸು ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವೆರದು ನನ್ನ ಪ್ರತಿವಾದ ಪತ್ರವನ್ನು ವಾದಿಯರೆ ಆ ರೀತಿ ಬರೆಸಿರುತ್ತಾರೆ ಎಂದು ಹೇಳುತ್ತಾರೆ. ಈ ದಾವೆ ಹಾಕಿದ ನಂತರ ನನ್ನ ಹಾಗೂ ವಾದಿಯ ನಡುವೆ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿ. ನಾನು ಹೇಳಿದಂತೆ ನನ್ನ ಪ್ರತಿವಾದ ಪತ್ರವನ್ನು ವಕೀಲರು ಬರೆದಿರುತ್ತಾರೆ ಎಂದರೆ ಸರಿ. ನಾನು ಖರೀದಿ ಪತ್ರ ಮಾಡಿಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವಧಿ ಮುಗಿಯುವ ಮೊದಲೆ ಈ

ದಾವೆ ಸಲ್ಲಿಸಿದ್ದು ಅದು ಉರ್ಜಿತ ವಾಗುವುದಲ್ಲಿ ಎಂದು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸಾಕ್ಷಿ ನಾನು ಯಾರಿಗು ಹೊಲ ಕೊಡುವುದಿಲ್ಲ ಎಂದು ಹೇಳುತ್ತಾರೆ. ನಾನು ಮತ್ತು ನನ್ನ ಮಗ ಎಲ್ಲರೂ ಸೇರಿಕೊಂಡು ಖರೀದಿ ಪತ್ರ ಮಾಡಿಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಾರ್ಟಗೇಜ ಮಾಡಿ ಕೊಟ್ಟಿದ್ದೆ ಮತ್ತು ವಾದಿ ರೂ.8,00,000/-ವಾದಿಗೆ ವಾಪಸ್ಸು ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ಜನರ ಸಮಕ್ಷಮದಲ್ಲಿ ಅವರ ಕೈಯಲ್ಲಿ ಹಣ ಕೊಟ್ಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ 4 ಜನ ಅಕ್ಬರ, ಶರಣಬಸವ, ಫಯ್ಯಾಜರವರ ಬದುಕಿದ್ದಾರೆ. ಮಾರ್ಟಗೇಜ ಮಾಡಿ ಕೊಟ್ಟಿದ್ದೆ ಮತ್ತು ವಾದಿ 4 ಜನರ ಸಮಕ್ಷಮದಲ್ಲಿ ಅವರ ಕೈಯಲ್ಲಿ ರೂ.8,00,000/-ಹಣ ಕೊಟ್ಟಿರುತ್ತೇನೆ ಎಂದು ನನ್ನ ಪ್ರಮಾಣ ಪತ್ರದಲ್ಲಿ ಬರೆದಿಲ್ಲ. ಯಾಕೆ ಬರೆದಿಲ್ಲ ಎಂದರೆ ಸಾಕ್ಷಿ ನಾನು ಅವರ ಮೇಲೆ ವಿಸ್ವಾಸ ಮಾಡಿದ್ದೆ ಎಂದು ಹೇಳುತ್ತಾರೆ. ನಾನು ವಾದಿಗೆ ಯಾವುದೇ ಹಣ ವಾಪಸ್ಸು ಕೊಟ್ಟಿಲ್ಲ ಆದ್ದರಿಂದ ಅದರ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿಯಲ್ಲ.

<u>**ಮರುವಿಚಾರಣೆ ಇಲ್ಲ:**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.